## ಅನಿವಾರ್ಯ...

ನಮ್ಮ ಮನೆ ಪಕ್ಕದಲ್ಲಿ ಹೊಸ ಜೋಡಿ ಬಂದು ನೆಲೆಸಿತ್ತು. ಹೆಂಡತಿ ನಿತ್ಯವೂ ಗಂಡ ಮನೆಗೆ ಬಂದ ನಂತರವೇ ಊಟ ಮಾಡುತ್ತಾರೆ ಎನ್ನುವ ವಿಚಾರ ಬಹಳ ಬೇಗ ಸುತ್ತಮುತ್ತ ಹರಡಿತು. ಗಂಡ ಮನೆಗೆ ಬರಲು ಎಷ್ಟು ತಡವಾದರೂ ಅವಳು ಕಾಯುತ್ತಿದ್ದಳಂತೆ. ಒಮ್ಮೆ ಈ ಬೀದಿಯ ಕೆಲ ಮಹಿಳಾಮಣಿಗಳು ಆಕೆಯ ಬಳಿ, 'ನೀವು ಎಷ್ಟು ಹೊತ್ತಾದ್ರೂ ನಿಮ್ಮ ಯಜಮಾನರು ಬರೋವರೆಗೂ ಊಟ ಮಾಡೊಲ್ಲವಂತೆ... ಪ್ರತಿದಿನ ಕಾಯೋದು ಕಷ್ಟ ಅಲ್ವಾ? ಇಷ್ಟೊಂದು ಸಹನೆ ಹೇಗೆ ಬೆಳೆಸಿಕೊಂಡಿರಿ?' ಎಂದು ಕೇಳಿದರು. ಆಕೆ, 'ಅವರು ಬರೋವರೆಗೂ ಕಾಯದೇ ಬೇರೆ ವಿಧಿ ಇಲ್ಲ. ನನಗದು ಅನಿವಾರ್ಯ. ಏಕೆಂದರೆ, ಅವರು ಮನೆಗೆ ಬಂದು ಅಡುಗೆ ಮಾಡಿಕೊಟ್ಟ ನಂತರವೇ ನಾನು ಊಟ ಮಾಡಬೇಕು' ಎಂದರಂತೆ. ಪ್ರಶ್ನೆ ಕೇಳಿದ ಮಹಿಳೆಯರು ಸುಸ್ತು!

**ಅರವಿಂದ ಜಿ.ಜೋಷಿ**



---



## ವಿಪರ್ಯಾಸ...

ನಮ್ಮ ಸಂಬಂಧಿ ದಂಪತಿಗೆ ಅನೇಕ ವರ್ಷಗಳಾದರೂ ಮಕ್ಕಳಾಗಿರಲಿಲ್ಲ. ಒಮ್ಮೆ ಅವರು ಖ್ಯಾತ ಸ್ತ್ರೀ ತಜ್ಞರ ಬಳಿಗೆ ಹೋಗಿದ್ದರು. ಹೊರಗಡೆ ಎಷ್ಟು ಕಾಯ್ದರೂ ವೈದ್ಯರು ಬರದೇ ಹೋದಾಗ ಸಹಾಯಕಿಯ ಬಳಿ ಹೋಗಿ, 'ಇನ್ನೂ ಎಷ್ಟು ಹೊತ್ತು ಡಾಕ್ಟರ್ ಬರಲು?' ಎಂದು ಕೇಳಿದಾಗ, 'ನಮ್ಮ ಡಾಕ್ಟರ್‌ಗೆ ಮದುವೆಯಾಗಿ ಹತ್ತು ಹರ್ಷ ಆದ್ರೂ ಮಕ್ಕಳಾಗಿಲ್ಲವಲ್ಲ, ಒಂದು ದೇವಸ್ಥಾನ ಇದೆಯಂತೆ, ಅಲ್ಲಿ ವಿಶೇಷ ಸೇವೆ ಮಾಡಿಸಿದರೆ ಮಕ್ಕಳಾಗುತ್ತವೆ ಅಂತ ಯಾರೊ ಹೇಳಿದರು. ಆ ದೇವಸ್ಥಾನಕ್ಕೆ ಹೋಗಿದ್ದಾರೆ. ಇಷ್ಟೊತ್ತಿಗೆ ಬರಬೇಕಿತ್ತು. ಬಹುಶಃ ಬಹಳ ರಶ್ ಇರಬೇಕು ಅಲ್ಲಿ...' ಎಂದ ಸಹಾಯಕಿಯ ಮಾತು ಕೇಳಿ ಇವರು ಎದ್ದು ಬಂದರು.

**ವಾಣಿಶ್ರೀ ಕೊಂಬಾಡಿ**

**ಕಲೆ: ಗಣೇಶ ಆಚಾರ್ಯ**